ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ

**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿವೃದ್ಧಿ/308(ಭಾಗ-1)/2022 ದಿನಾಂಕ:29.12.2022

**ಸೇರ್ಪಡೆ ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯತಿಗಳಲ್ಲಿ, ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟ (ಜಿಪಿಎಲ್‌ಎಫ್-GPLF) ಮಹಿಳಾ ಸ್ವಸಹಾಯ ಸಂಘಗಳು ಘನ ತ್ಯಾಜ್ಯ ನಿರ್ವಹಣೆಯ ಕುರಿತು.

**ಉಲ್ಲೇಖ:1.** ಈ ಕಛೇರಿ ಸುತ್ತೋಲೆ ಸಂಖ್ಯೆ:ಕಪಂರಾಆ/ಅಭಿವೃದ್ಧಿ/308 /2022 ದಿನಾಂಕ: 18.07.2022

2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 507 ಗ್ರಾಪಂಅ 2019 ದಿನಾಂಕ:22.12.2020
3. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಹೊರಡಿಸಲಾಗಿರುವ ಗ್ರಾಮೀಣ ನೈರ್ಮಲ್ಯ ನೀತಿ, ಕಾರ್ಯತಂತ್ರ ಮತ್ತು ಮಾದರಿ ಉಪವಿಧಿಗಳು
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 300 ಜಿಪಸ 2022 ದಿನಾಂಕ:01.07.2022
5. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಪತ್ರಸಂಖ್ಯೆ:RDWSD/39/SBM-G-P-11/IEC/2020 ದಿನಾಂಕ:16.08.2022

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳಲ್ಲಿ, ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟ (ಜಿಪಿಎಲ್‌ಎಫ್-GPLF) ಮಹಿಳಾ ಸ್ವಸಹಾಯ ಸಂಘಗಳು ಘನ ತ್ಯಾಜ್ಯ ನಿರ್ವಹಣೆಯ ಕುರಿತು ಉಲ್ಲೇಖಿತ(1) ಸುತ್ತೋಲೆಯಲ್ಲಿ ವಿಸ್ತೃತವಾಗಿ ತಿಳಿಸಲಾಗಿದ್ದು, ಸದರಿ ಸುತ್ತೋಲೆಗೆ ಈ ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳಿಗೆ ಸಂಬಂಧಿಸಿದಂತೆ ಮತ್ತು ಅಳವಡಿಕೊಳ್ಳಬೇಕಾದ ಅಂಶಗಳನ್ನು ಸೇರ್ಪಡೆಗೊಳಿಸಲಾಗಿದೆ.

1. ಅದರಂತೆ ಉಲ್ಲೇಖಿತ(1) ರ ಸುತ್ತೋಲೆಯ ಕಂಡಿಕೆ(3) ರಲ್ಲಿ ತಿಳಿಸಿರುವಂತೆ ಗ್ರಾಮ ಪಂಚಾಯತ್‌ನಲ್ಲಿನ ಘನ ತ್ಯಾಜ್ಯ ನಿರ್ವಹಣೆ ಚಟುವಟಿಕೆಗಳನ್ನು ಪರಿಶೀಲಿಸಲು ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ಸದಸ್ಯ ಕಾರ್ಯದರ್ಶಿಯಾಗಿ, ಗ್ರಾಮ ಪಂಚಾಯತ್ ಅಧ್ಯಕ್ಷರನ್ನು ಅಧ್ಯಕ್ಷರನ್ನಾಗಿ ಹಾಗೂ ಸಂಜೀವಿನಿ ಒಕ್ಕೂಟದ (GPLF) ಅಧ್ಯಕ್ಷರು, ಸಮುದಾಯ ಸಂಪನ್ಮೂಲ ವ್ಯಕ್ತಿಗಳು (community cadres such as Master Bookkeepers (MBKs) and Local Community Resource Persons (LCRPs), ಸ್ವಚ್ಛ ಭಾರತ ಅಭಿಯಾನ(ಗ್ರಾಮೀಣ)ದ ಸಂಯೋಜಕರು, ಸಂಜೀವಿನಿ (NRLM) ಸಂಯೋಜಕರನ್ನು ಹಾಗೂ ಉಲ್ಲೇಖ(2)ರಲ್ಲಿ ರಚಿಸಲಾಗಿರುವ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯನ್ನು ಒಳಗೊಂಡ ಸಮಿತಿಯನ್ನು ಪುನರ್ ರಚಿಸುವಂತೆ ತಿಳಿಸಿದೆ.

2. ಉಲ್ಲೇಖಿತ(1)ರ ಸುತ್ತೋಲೆಯ ಕಂಡಿಕೆ(5) ರಲ್ಲಿ ತಿಳಿಸಿರುವಂತೆ **ಅನುಬಂಧ-5** ರಲ್ಲಿ ತ್ಯಾಜ್ಯ ಉತ್ಪಾದಕರಿಂದ ಮಾಹೆಯಾನ ಪಡೆಯಬಹುದಾದ ಬಳಕೆದಾರರ ಶುಲ್ಕವನ್ನು ವಿವರಿಸಿದೆ. ಪ್ರತಿ ವರ್ಷ ಬಳಕೆದಾರರ ಶುಲ್ಕವನ್ನು, ವಾರ್ಷಿಕ ಕನಿಷ್ಠ 1 % ಹೆಚ್ಚಿಸುವುದು. ಗ್ರಾಮ ಪಂಚಾಯತಿಯು ಈ ಶುಲ್ಕವನ್ನು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಮೂಲಕ ಸಂಗ್ರಹಿಸಿ, ತ್ಯಾಜ್ಯ ನಿರ್ವಹಣೆಯ ಪ್ರಕ್ರಿಯೆಯಲ್ಲಿ ಬಳಸಲು ಒಕ್ಕೂಟಗಳಿಗೆ ನೀಡಲು ಸಾಮಾನ್ಯ ಸಭೆಯಲ್ಲಿ ಠರಾವುವನ್ನು ಮಂಡಿಸುವುದು.
3. ಉಲ್ಲೇಖಿತ(1)ರ ಸುತ್ತೋಲೆಯ ಕಂಡಿಕೆ(11) ರಲ್ಲಿ ತಿಳಿಸಿರುವಂತೆ ಗ್ರಾಮ ಪಂಚಾಯಿತಿಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಚಟುವಟಿಕೆಗಳಿಗಾಗಿ ತಗಲುವ ವಾರ್ಷಿಕ ವೆಚ್ಚದ ಕ್ರಿಯಾ ಯೋಜನೆಯನ್ನು ಅನುಬಂಧ-12 ರಂತೆ ತಯಾರಿಸುವುದು.
4. ಉಲ್ಲೇಖ(3)ರಂತೆ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯಿಂದ ಹೊರಡಿಸಲಾಗಿರುವ ಉಪ-ಕಾನೂನುಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಅಳವಡಿಸಿಕೊಳ್ಳುವುದು. (ಪ್ರತಿ ಲಗತ್ತಿಸಿದೆ.)
5. ಉಲ್ಲೇಖ(1) ರ ಸುತ್ತೋಲೆಯಲ್ಲಿ ಘನ ತ್ಯಾಜ್ಯ ನಿರ್ವಹಣೆಗಾಗಿ ವಾರ್ಷಿಕ ಯೋಜನೆಯನ್ನು ತಯಾರಿಸಲು ತಿಳಿಸಲಾಗಿದೆ. ಅದರ ಪ್ರಕಾರ ಗ್ರಾಮ ಪಂಚಾಯತಿಗಳಲ್ಲಿ GPLFಗಳ ಆರ್ಥಿಕ ಸುಸ್ಥಿರತೆಗಾಗಿ ಗ್ರಾಮ ಪಂಚಾಯಿತಿಯಿಂದ ನೀಡುವ ಅಂತರ ನಿಧಿಯನ್ನು (Viability Gap Funding) ಹಂಚಿಕೆ ಮಾಡಲು ಪರಾಮರ್ಶಿಸುವುದು ಮತ್ತು ಅದರಂತೆ ಕ್ರಿಯಾ ಯೋಜನೆಯ ಆಯವ್ಯಯದಲ್ಲಿ ಶೇ.25 ರಷ್ಟು ಹಣವನ್ನು 15ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗುವ ನಿರ್ಬಂಧಿತ ಅನುದಾನದಲ್ಲಿ ನೈರ್ಮಲ್ಯೀಕರಣ ಸೇವೆಗಳಿಗಾಗಿ ಮೀಸಲಿರಿಸಿದ ಶೇ.50 ರಷ್ಟು ಅನುದಾನದಲ್ಲಿ ಭರಿಸುವಂತೆ ತಿಳಿಸಿದೆ.
6. ಉಲ್ಲೇಖ(5) ರಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಹೊರಡಿಸಲಾಗಿರುವ ಪತ್ರದಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ನೈರ್ಮಲ್ಯ ಯೋಜನೆ ತಯಾರಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು

**ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು(ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ(ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

2. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ರವರ ಆಪ್ತ ಶಾಖೆಗೆ.
4. ಕಛೇರಿ ರಕ್ಷಾ ಕಡತಕ್ಕೆ.